**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.493/2013**

ಅಸಾಃ 2 (ಚಾಸಾ-4)

| | |
|---|---|
| ಹೆಸರು | ಯಮವ್ವ ಹೊಟಕರ |
| ತಂದೆಯ /ಗಂಡನ ಹೆಸರು | ಹಣಮಂತ |
| ವಯಸ್ಸು | 49 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಸಸಾಲಟ್ಟಿ |

ದಿನಾಂಕ 28-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-1 ನನ್ನ ಗಂಡ, 1 ನೇ ಆರೋಪಿ ನನ್ನ ತಮ್ಮ. 2 ರಿಂದ 4 ನೇ ಆರೋಪಿತರು ನನ್ನ ಸಂಬಂದಿಕರು. ನನಗೆ ಚಾಸಾ- 5 ಮತ್ತು 6 ರವರ ಪರಿಚಯ ಇದೆ. ಸುಮಾರು 10-11 ವರ್ಷಗಳ ಹಿಂದೆ ಆರೋಪಿತರು ಬೆಳಿಗ್ಗೆ 10-11 ಗಂಟೆ ಸುಮಾರಿಗೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ನನ್ನ ಗಂಡ ಬಂದು ಪ್ರಶ್ನಿಸಿದಾಗ 1 ನೇ ಆರೋಪಿ ಬಡಿಗೆಯಿದ ಅವರ ತಲೆಗೆ ಹೊಡೆದಿರುತ್ತಾನೆ. 2 ರಿಂದ 4 ನೇ ಆರೋಪಿತರು ಊರನ್ನು ಬಿಡುವಂತೆ ಬೆದರಿಕೆ ಹಾಕಿರುತ್ತಾರೆ.ನನ್ನ ಗಂಡನನ್ನು ಚಾಸಾ-6 ರವರು ಅಸ್ಪತ್ರಗೆ ದಾಖಲ ಮಾಡಿರುತ್ತಾರೆ. ಈ ಕುರಿತು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಬಡಿಗೆಯನ್ನು ನೋಡಿದರೆ ಗುರುತಿಸಲು ಆಗುವದಿಲ್ಲ ಕಾರಣ ಈಗ ಕಣ್ಣು ಸರಿಯಾಗಿ ಕಾಣುತ್ತಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 22-03-2013 ರಂದು ಜಗಳ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಯಿಂದ ತೆಗೆದುಕೊಂಡಿದ್ದ ಹಣವನ್ನು ಮರಳಿ ಕೊಡುವಂತೆ ಮತ್ತು ನನ್ನ ತಂಗಿಯ ಮದುವೆಯ ಸಿಡಿಯನ್ನು ಕೊಡುವಂತೆ ಜಗಳವನ್ನು ತೆಗೆದಿದ್ದರು ಎಂದರೆ ಸರಿ. 2 ನೇ ಆರೋಪಿ ನನ್ನ ಕೈ ಹಿಡಿದು ಜಗ್ಗಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ 3 ಮತ್ತು 4 ನೇ ಆರೋಪಿತರ ಪರ ಶ್ರೀ. ಎಸ್ ವಿ ಜಿ ವಕೀಲರಿಂದ:-**

ನಾನು ಪೋಲಿಸರ ಮುಂದೆ ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ ಎಂದು ಹೇಳಲು

ಬರುವದಿಲ್ಲ. ನನ್ನ ಹೇಳಿಕೆಯಂತೆ ಪೋಲಿಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ. ಅದರ ಮಾಹಿತಿ ಇರುವದಿಲ್ಲ ಎಂದರೆ ಸರಿಯಲ್ಲ. ಅಂದಾಜು ½ – ¼ ಗಂಟೆ ಜಗಳವಾಗಿರುತ್ತದೆ. ನನ್ನನ್ನು ತಲೆಗೆ ಪೆಟ್ಟಾಗಿರುತ್ತದೆ ಮತ್ತು ನನ್ನ ಕೈ ಹಿಡಿದು ಜಗ್ಗಿರುತ್ತಾರೆ. ನನ್ನ ತಲೆಗೆ ರಕ್ತ ಗಾಯವಾಗಿರುತ್ತದೆ. ನನ್ನ ಸೀರೆಗೆ ರಕ್ತ ಹತ್ತಿತ್ತು. ಅದನ್ನು ಪೋಲಿಸರು ತೆಗೆದುಕೊಂಡಿರುವದಿಲ್ಲ. 3 ನೇ ಆರೋಪಿ ಏನು ಮಾಡಿರುವದಿಲ್ಲ ಎಂದರೆ ಸರಿಯಲ್ಲ. ಆತನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ 4 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಏನು ತಪ್ಪು ಮಾಡದೇ ಇದ್ದರೂ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೂ ಮಾ -1 ಮತ್ತು 2 ರಂತೆ ಬಡಿಗೆಗಳು ಎಲ್ಲ ಕಡೆ ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡಲು ಪಿರ್ಯಾದಿದಾರನಾದ ನನ್ನ ಗಂಡನನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ನಡುವೆ ವೈ ಮನಸ್ಸು ಇತ್ತು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ .

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.493/2013**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಹಣಮಂತ ಹೊಟಕರ |
| ತಂದೆಯ /ಗಂಡನ ಹೆಸರು | ಪರಶುರಾಮ |
| ವಯಸ್ಸು | 55 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನಾವಲಗಿ |

ದಿನಾಂಕ 28-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-4 ನನ್ನ ಹೆಂಡತಿ, 1 ನೇ ಆರೋಪಿ ನನ್ನ ಹೆಂಡತಿಯ ತಮ್ಮ. 2 ರಿಂದ 4 ನೇ ಆರೋಪಿತರು ನನ್ನ ಸಂಬಂದಿಕರು. ನನಗೆ ಚಾಸಾ- 5 ಮತ್ತು 6 ರವರ ಪರಿಚಯ ಇದೆ. 2013 ನೇ ಸಾಲಿನಲ್ಲಿ ನಾನು ನಾವಲಗಿಯಲ್ಲಿರುವ ನನ್ನ ಮಾವನ ಮನೆಯಲ್ಲಿ ನಾನು ವಾಸ ಇದ್ದೇನು. ಆಗ ಆರೋಪಿ ನಂಬರ 1, 3 ಮತ್ತು 4 ರವರು ಕೊಟ್ಟ ಕಿರುಕುಳದಿಂದ ನನ್ನ ಮಾವ ಮರಣ ಹೊಂದಿರುತ್ತಾರೆ. ನಂತರ ನಾನು ಬಾಡಿಗೆ ಮನೆ ಮಾಡಿಕೊಂಡು ಬೇರೆ ವಾಸ ಇರುತ್ತೇನೆ. ಆಗ ಒಂದು ದಿನ 1 ರಿಂದ 4 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ನನಗೆ ಬೈಯುತ್ತಾ ಬಂದು ಅವರಲ್ಲಿ 1 ನೇ ಆರೋಪಿ ನನ್ನ ತಂದೆಯಿಂದ ತೆಗೆದುಕೊಂಡ ಹಣವನ್ನು ಮರಳಿ ಕೊಡಬೇಕೆಂದು ಹೇಳಿ ಸಿಡಿಯನ್ನು ಕೊಡುವಂತೆ ಕೇಳಿರುತ್ತಾರೆ. ಆಗ ಅವರು ನನ್ನ ತಲೆಗೆ ಬಡಿಗೆಯಿಂದ ಹೊಡೆದಿರುತ್ತಾರೆ. ನನಗೆ ರಕ್ತ ಗಾಯವಾಗಿರುತ್ತದೆ ಆಗ ನನ್ನ ಹೆಂಡತಿ ಬಿಡಿಸಲು ಬಂದಾಗ 1 ಮತ್ತು 2 ನೇ ಅರೋಪಿತರು ಅಕೆಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ 2 ನೇ ಅರೋಪಿ ಆಕೆಯ ಸೀರೆ ಸೆರಗನ್ನು ಹಿಡಿದು ಎಳೆದಿರುತ್ತಾನೆ. ಆಗ 3 ಮತ್ತು 4 ನೇ ಆರೋಪಿತರು 1 ನೇ ಆರೋಪಿಯ ಕೈಯಿಂದ ಬಡಿಗೆಯನ್ನು ಕಸಿದುಕೊಂಡು ಊರನ್ನು ಬಿಡದಿದ್ದರೆ ನಿಮ್ಮನ್ನು ಕೊಲ್ಲುತ್ತೇವೆ ಎಂದು ಹೇಳುತ್ತಾ ಅವಾಚ್ಯವಾಗಿ ಬೈದಿರುತ್ತಾರೆ. ಆಗ ಚಾಸಾ- 5 ಮತ್ತು 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಚಾಸಾ-6 ರವರು ನನ್ನನ್ನು ಸರ್ಕಾರಿ ಆಸ್ಪತ್ರೆಗೆ ದಾಖಲ ಮಾಡಿರುತ್ತಾರೆ. ನಂತರ ನನ್ನ ಹೇಳಿಕೆಯಂತೆ ಪೋಲಿಸರು ದೂರನ್ನು ಬರೆದುಕೊಂಡಿರುತ್ತಾರೆ. ಹೆಚ್ಚಿನ ಚಿಕಿತ್ಸೆಗಾಗಿ ಜಮಖಂಡಿ

ಕೆ ಎಲ್ ಇ ಆಸ್ಪತ್ರೆಗೆ ದಾಖಲು ಆಗಿರುತ್ತೇನೆ. ನಾನು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆ ಫಿರ್ಯಾದಿಯಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎರಡು ಬಡಿಗೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮೂ ಮಾ -1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 3 ಮತ್ತು 4 ನೇ ಆರೋಪಿತರ ಪರ ಶ್ರೀ. ಎಸ್ ವಿ ಜಿ ವಕೀಲರಿಂದ:-**

ನಾನು ಶಾಲೆ ಕಲಿತಿರುವದಿಲ್ಲ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವದಿಲ್ಲ. ನಾನು ಠಾಣೆಗೆ ಹೋಗಿರುವದಿಲ್ಲ. ಆದರೆ ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ದೂರನ್ನು ಬರೆದುಕೊಂಡಿರುತ್ತಾರೆ. ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಎಂದು ನನಗೆ ನೆನಪಿರುವದಿಲ್ಲ. ಯಾವ ದಿನಾಂಕದಂದು ಕೃತ್ಯ ನಡೆದಿರುತ್ತದೆ ಎಂದು ನನ್ನ ಫಿರ್ಯಾದಿಯಲ್ಲಿ ನಮೂದು ಆಗಿರುವದಿಲ್ಲ ಎಂದರೆ ಸರಿಯಲ್ಲ. ಜಗಳ ನಡೆದಿದೆ ಎನ್ನಲಾದ ಸ್ಥಳದ ಚಕಬಂದಿಯನ್ನು ನನಗೆ ಹೇಳಲು ಬರುವದಿಲ್ಲ. ಆದರೆ ನಾನು ಬಾಡಿಗೆಗೆ ವಾಸ ಇದ್ದ ಮನೆಯ ಮುಂದೆ ಆಗಿರುತ್ತದೆ. ಸದರಿ ಮನೆಯ ನಂಬರ ನನಗೆ ಹೇಳಲು ಬರುವದಿಲ್ಲ. ದೂರನ್ನು ಬರೆದುಕೊಂಡು ಪೋಲಿಸರ ಹೆಸರು ನನಗೆ ಹೇಳಲು ಬರುವದಿಲ್ಲ. ನಿಪಿ-1 ಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. 3 ಮತ್ತು 4 ನೇ ಆರೋಪಿತರು ನನಗೆ ಏನು ಮಾಡಿರುವದಿಲ್ಲ ಎಂದರೆ ಸರಿಯಲ್ಲ. ಅವರೇ ನನಗೆ ಮತ್ತು ನನ್ನ ಮಾವನಿಗೆ ಕಿರುಕುಳ ಕೊಡುತ್ತಿದ್ದರು. ನನಗೆ ಜಾಗ ಬಿಡುವ ಕುರಿತಾಗಿ ಕಿರುಕುಳ ಕೊಡುತ್ತಿದ್ದರು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ವಯಕ್ತಿಕ ಮಾಹಿತಿ ನನಗೆ ಇರುವದಿಲ್ಲ ಎಂದರೆ ಸರಿ. ಆರೋಪಿತರು ನನಗೆ ಮುಂಜಾನೆ 10-00 ಗಂಟೆಗೆ ಹೊಡೆಯಲು ಬಂದಿದ್ದು ಬಡಿಗೆಯಿಂದ ಹೊಡೆದ ನಂತರ ನನಗೆ ಚಕ್ಕರ್ ಬಂದು ಕೆಳಗೆ ಕುಳಿತುಕೊಂಡಿರುತ್ತೇನೆ . ನಂತರ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. 1 ನೇ ಆರೋಪಿ ಬಡಿಗೆಯಿಂದ ಹೊಡೆದಾಗ ನನ್ನ ಅಂಗಿಗೆ ರಕ್ತ ಹತ್ತಿರುತ್ತದೆ ಎಂದರೆ ಸರಿ. ರಕ್ತ ಹತ್ತಿದ ಅಂಗಿಯನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಅದನ್ನು ಪೋಲಿಸರು ತೆಗೆದುಕೊಂಡಿರುವದಿಲ್ಲ. ಬನಹಟ್ಟಿಯ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನ ದಾಖಲ ಆಗಿದ್ದೇನು. ನಂತರ ಜಮಖಂಡಿಯ ಆಸ್ಪತ್ರೆಯಲ್ಲಿ 07 ದಿನ ದಾಖಲಾಗಿದ್ದೇನು. ಆಗ ನಾನು ಮಾತನಾಡುವ

ಸ್ಥಿತಿಯಲ್ಲಿ ಇದ್ದೇನು. ಆಸ್ಪತ್ರೆಯಿಂದ ಬಂದ ನಂತರ ನನ್ನನ್ನು ಪೋಲಿಸರು ಕರೆಸಿರುವದಿಲ್ಲ. ನಾನು ಜಮಖಂಡಿ ಆಸ್ಪತ್ರೆಗೆ ದಾಖಲಾಗಿರುವದಿಲ್ಲ ಎಂದರೆ ಸರಿಯಲ್ಲ.

ನನಗೆ ಮತ್ತು 3 ಮತ್ತು 4 ನೇ ಆರೋಪಿತರ ನಡುವೆ ವೈಮನಸ್ಸು ಇತ್ತು ಎಂದರೆ ಸರಿ. ಜಗಳ ನಡೆದಿದೆ ಎನ್ನಲಾದ ದಿನ ಎಷ್ಟು ಜನ ಕೂಡಿದ್ದರು ಎಂದು ನನಗೆ ಹೇಳಲು ಬರುವದಿಲ್ಲ. ನನಗೆ ಪ್ರಜ್ಞೆ ತಪ್ಪಿರುತ್ತದೆ. ಮೂ ಮಾ -1 ಮತ್ತು 2 ರಂತೆ ಬಡಿಗೆಗಳು ಎಲ್ಲ ಕಡೆ ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ .